ಬೇಡದವನೆಂದು ತೋರಿ ಹೋಯಿತು. ಪರಿಮಳ ಸ್ಫುರಿಸುವ ಸುಂದರವಾಗಿರುವ ಉಡುಪುಗಳೂ, ರಬ್ಬರ್ ಗೂಬೆಯೂ, ನೋಡಲು ಸುಂದರವಾಗಿರುವ ಮುಖವೂ ನನಗಿಲ್ಲ. ಗುಂಡಿ ಕಿತ್ತುಹೋದ ನನ್ನ ಟ್ರೌಸರು ಯಾವಾಗಲೂ ಕೊಳೆಯಾಗಿರುತ್ತಿತ್ತು. ಅದರಿಂದಾಗಿರಬಹುದೇ ಅಪ್ಪ ಸಮೀಪ ನಿಂತು ಮಾತನಾಡದಿರುವುದು? ನನಗೆ ಅಳಬೇಕೆನಿಸಿತು. ಹಾಸಿಗೆಗೆ ಮುಖ ಅದುಮಿ ಮಿಸುಕಾಡದೆ ಮಲಗಿದೆ. 'ವಾಸು...' ಅಪ್ಪ ಕರೆದರು. 'ಏ...' 'ಬಾ, ಇಲ್ಲಿ ಬಾ' ನಾನು ಮೆಲ್ಲನೆ ಆ ಕೋಣೆಗೆ ಹೊದೆ. ಅಪ್ಪನ ಹೆಗಲಿಗೆ ಜೊತು ಬಿದ್ದಿರುವ ಲೀಲಾಳತ್ತ ನೋಡಲು ಧೈರ್ಯ ಬರಲಿಲ್ಲ. 'ಬಾ ಮಗುವೇ!' ಅಪ್ಪ ನನ್ನನ್ನು ಆಲಿಂಗಿಸಿಕೊಂಡರು. ನನ್ನ ಸಣ್ಣ ತಲೆಯನ್ನು ಸವರುತ್ತ ಅಪ್ಪ ಲೀಲಾಳೊಡನೆ ಏನನ್ನೋ ಹೇಳಿದರು. ಆ ಭಾಷೆ ನನಗೆ ಈಗಲೂ ಅಜ್ಞಾತ. ಆದರೆ, ಅದರ ಅರ್ಥ ಈಗ ನನಗೆ ತಿಳಿದಿದೆ, 'ಮಗಳೇ, ಇವನು ನಿನ್ನ ಸಹೋದರ...' ನೋವಿನೊಡನೆ ನೆನಪು ಮಾಡಿಕೊಳ್ಳುತ್ತಿದ್ದೇನೆ. ಅಂದು ಕುಟುಂಬದ ಒಳಗೆ ಒಂದು ಸುಂಟರಗಾಳಿ ಬೀಸಿತು. ಕಳೆದ ಆರು ದಿನಗಳಿಂದ ಅದು ರೂಪಪಡೆಯುತ್ತಿತ್ತು ಎಂಬುದು ನನಗೆ ಆಗ ತಿಳಿಯಿತು. ಅಪ್ಪನೂ ಅಮ್ಮನೂ ಪರಸ್ಪರ ಜಗಳ ಕಾಯತೊಡಗಿದರು. ಮನೆಯವರು ಯಾರೂ ಅದರಲ್ಲಿ ಪಾಲ್ಗೊಳ್ಳಲಿಲ್ಲ. ಹರಿತವಾದ ಮಾತುಗಳು, ರೋಷಾವೇಶಗಳು ಉಕ್ಕಿಬಂದವು, ಅಪ್ಪ ಸಾಧ್ಯವಾಗುವಷ್ಟರ ಮಟ್ಟಿಗೆ ಶಾಂತವಾಗಿರಲು ಶ್ರಮಿಸಿದರು. 'ನೀನು ಸುಮ್ಮನೆ ತಪ್ಪು ತಿಳಿದುಕೊಂಡಿದ್ದಿ...' 'ನನಗೆ ಕೇಳಬೇಕಾಗಿಲ್ಲ, ನನಗೆಲ್ಲಾ ಅರ್ಥವಾಯಿತು...' 'ಏನು ಅರ್ಥವಾಯಿತು?' 'ನನ್ನಿಂದ ಹೇಳಿಸಬೇಡಿ, ಮಾಧವ ನನಗೆ ಎಲ್ಲವನ್ನು ಬರೆದು ತಿಳಿಸಿದ್ದಾನೆ.' ಮಾಧವ ಯಾರೆಂದು ನನಗೆ ಗೊತ್ತಿದೆ. ಅಪ್ಪನ ಕೆಲಸದ ಜಾಗದ ಸಮೀಪದಲ್ಲಿಯೇ ಮಾಧವ ಮಾವ ನೆಲೆಸಿರುವುದು; ಅಮ್ಮನ ಅಣ್ಣ. ಮತ್ತೆ ಅಪ್ಪ ವಾದ ಮಾಡಲಿಲ್ಲ, ಅಮ್ಮ ಹೇಳುತ್ತಲೇಯಿದ್ದರು. ಬೆಂಕಿಯುಗುಳುವ ಮಾತುಗಳು. ನಾನು ಮುಖ ಮುಚ್ಚಿ ಮಲಗಿದೆ. ಹೃದಯ ತುಂಬಿ ಬರುತ್ತಿತ್ತು. ನಾನು ಮನಸ್ಸಿನಲ್ಲಿಯೇ ಪ್ರಾರ್ಥಿಸಿದೆ. 'ಭಗವತೀ! ಏನೂ ಆಗದಿರಲಿ...' ಮೇಜಿನ ಮೇಲೆ ಗಾಜಿನ ಗ್ಲಾಸುಗಳು ಚದುರಿ ಬಿದ್ದವು. ನಾನು ಕಿವಿ ನಿಮಿರಿಸಿದೆ. ತಲೆದಿಂಬಿಗೆ ಕಣ್ಣೀರು ಹನಿಗಳು ಉದುರಿದವು. 'ದೇವರೆ!' ಸ್ವಲ್ಪ ಹೊತ್ತು ಕಳೆದಾಗ ಅಮ್ಮ ಏಣಿಯ ಮೆಟ್ಟಿಲುಗಳನ್ನಿಳಿದು ಹೋಗುವುದನ್ನು ಕಂಡೆ. ಅದುಮಿ ಹಿಡಿದ ಬಿಕ್ಕಳಿಕೆಗಳು. ಮರುದಿನ ಬೆಳಗ್ಗೆ ನಾನು ಎಚ್ಚೆತ್ತಾಗ ಕಂಡುದು ಅಪ್ಪ ಮತ್ತು ಲೀಲಾ ಹೊರಡಲು ಸಿದ್ಧವಾಗಿದ್ದರು... ಜಗಲಿಯಲ್ಲಿ ಪೆಟ್ಟಿಗೆಗಳನ್ನು ಜೋಡಿಸಿಡಲಾಗಿದೆ. 'ಅಪ್ಪ ಹೋಗುವುದೆಲ್ಲಿಗೆ?' ನಾನು ಅಣ್ಣನಲ್ಲಿ ಕೇಳಿದೆ. ಅಣ್ಣ ಸಿಟ್ಟಿನಿಂದ ಹೇಳಿದ, 'ಎಲ್ಲಿಗೋ?' ಆಗ ನೋವಿನಿಂದ ನಾನು ಯೋಚಿಸಿದೆ; ಇಲ್ಲಿರುವವರಿಗೆಲ್ಲ ಏನಾಗಿದೆ? ಅಪ್ಪ ಮೊದಲು ಅಜ್ಜಿಗೆ ವಿದಾಯ ಹೇಳಿದರು. ಮತ್ತೆ ನಮ್ಮಲ್ಲಿ. ಅಣ್ಣನೂ, ಬಾಲಣ್ಣನೂ ಕಣ್ಣೊರೆಸಿಕೊಂಡರು. ಅಪ್ಪ ಅದನ್ನು ನೋಡಲಿಲ್ಲವೆಂದು ತೋರುತ್ತದೆ. ಅಂಗಳಕ್ಕಿಳಿದರು. ದೊಡ್ಡ ಕೊಳಂಬೊ ಕೊಡೆ ತೋಳಿನಲ್ಲಿ ಸಿಕ್ಕಿಸಿಕೊಂಡು ಅಪ್ಪ ಕೂಗಿದರು, 'ಲೀಲಾ!...' 'ಡ್ಯಾಡಿ....' ಅವಳು ಪ್ರಯಾಣಕ್ಕೆ ಹೊರಟುನಿಂತವಳಂತೆ ಹೊರಬಂದಳು. ದೊಡ್ಡ ಸೂರ್ಯಕಾಂತಿ ಹೂಗಳಿರುವ ಗೌನು ತೊಟ್ಟಿದ್ದಳು. ಸೊಂಟದಲ್ಲಿ ರೇಷ್ಮೆ ಲಾಡಿಯ ಕಟ್ಟು. ಕೈಯಲ್ಲಿ ರಬ್ಬರ್ ಗೂಬೆಯೂ ಇದೆ.

ಜಗಲಿಯಲ್ಲಿ ಗೋಡೆಗೆ ಒರಗಿ ನಿಂತ ನನ್ನನ್ನು ಅವಳೊಮ್ಮೆ ನೋಡಿ ಮಂದಹಾಸ ಬೀರಿದಳು. ನಾನು ನಗಲಿಲ್ಲ. ನನ್ನ ಬಳಿಗೆ ಬಂದು ಕೈಗಳಲ್ಲಿ ಆ ರಬ್ಬರ್ ಗೂಬೆಯನ್ನು ಇರಿಸಿದಾಗ ನಾನು ಆಶ್ಚರ್ಯದಿಂದ ಸ್ತಬ್ಧನಾದೆ. ಮತ್ತೆ ಮಂದಹಾಸ ಬೀರುತ್ತ, ಏನನ್ನೋ, ಪಿಸುಗುಟ್ಟಿದಳು. ಅವಳು ಪುಟ್ಟ ಕೊಡೆಯನ್ನು ಹಿಡಿದುಕೊಂಡು ಅಂಗಳಕ್ಕಿಳಿದಳು. ಅಪ್ಪ ಮುಂದೆ. ಹಿಂದಿನಿಂದ ಲೀಲಾ ಮೆಟ್ಟಿಲುಗಳನ್ನಿಳಿದಳು. ದೀರ್ಘವಾದ ಓಣಿಯ ಮೂಲಕ ಅವರು ನಡೆದು ದೂರಾಗುತ್ತಿದ್ದಾರೆ. ಅವರು ಹೋಗುತ್ತಿದ್ದಾರೆಯೇ. ಆ ಸೂರ್ಯಕಾಂತಿ ಹೂಗಳು ನೀಲ ರೇಷ್ಮೆ ಲಾಡಿಯೂ ದೃಷ್ಟಿಯಿಂದ ದೂರದಲ್ಲಿ ಮರೆಯಾದವು. ಹನ್ನೆರಡು ವರ್ಷಗಳ ಬಳಿಕ ನನಗೆ ಲೀಲಾ ನೆನಪಾದಳು. ಪ್ರೀತಿಯ ಸಹೋದರಿ ಮೈಲುಗಳ ದೂರದಿಂದ ನಾನು ಶುಭಕೋರುತ್ತೇನೆ. ನಿನ್ನ ನೆನಪಿಗಾಗಿ ನಾನಿದನ್ನು ಬರೆಯಲೆ!

●